ಪ್ರ-330-(50)

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ. ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) ರವರು ನಿಯಮ-330ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಉತ್ತರ

**ವಿಷಯ:-** ರಾಜ್ಯದ ಕಾಫಿ ಬೆಳೆಗಾರರಿಗೆ ಕೇಂದ್ರ ಕಾಫಿ ಮಂಡಳಿಯಿಂದ ಕೃಷಿ ಯಾಂತ್ರೀಕರಣಕ್ಕೆ ದೊರೆಯುತ್ತಿರುವ ಸಹಾಯಧನ, ಪ್ರೋತ್ಸಾಹಧನ, ಸಾಲ ಹಾಗೂ ಇತರೆ ಸೌಲಭ್ಯಗಳು ಕಡಿತಗೊಂಡಿರುವುದರಿಂದ ರಾಜ್ಯದ ಕಾಫಿ ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ.

**ಉತ್ತರ:-** ಕಾಫಿ ಬೆಳೆಯು ಕರ್ನಾಟಕ ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಕೊಡಗು, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಕಾಫಿ ಬೆಳೆಯನ್ನು ಒಟ್ಟು 2.45ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ವಾರ್ಷಿಕ ಉತ್ಪಾದನೆ 2.19 ಲಕ್ಷ ಟನ್ ಗಳಾಗಿರುತ್ತದೆ.

ಕೇಂದ್ರ ಸರ್ಕಾರದ ಕಾಫಿ ಮಂಡಳಿಯಿಂದ ಕಾಫಿ ಬೆಳೆಗಾರರಿಗೆ ಹಲವಾರು ಸವಲತ್ತುಗಳನ್ನು ಒದಗಿಸಲಾಗುತ್ತಿತ್ತು. 2011-2016ನೇ ಸಾಲಿನವರೆಗೆ ಕೃಷಿ ಯಂತ್ರೋಪಕರಣಗಳಾದ ಕಳೆ ಕತ್ತರಿಸುವ ಯಂತ್ರ, ಔಷಧಿ ಸಿಂಪಡಿಸುವ ಯಂತ್ರ, ಟೆಲಿಸ್ಕೋಪಿಕ್ ಪ್ರೂನರ್ಸ್, ಮಿನಿ ಟ್ರಾಕ್ಟರ್ ಇತ್ಯಾದಿ ಉಪಕರಣಗಳ ಖರೀದಿಗಾಗಿ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಈಗ ಈ ಸೌಲಭ್ಯವನ್ನು ಒದಗಿಸಲಾಗುತ್ತಿಲ್ಲ.

**2020-21 ನೇ ಸಾಲಿನವರೆಗೆ ಈ ಕೆಳಕಂಡ ಸವಲತ್ತುಗಳನ್ನು ಒದಗಿಸಲಾಗಿರುತ್ತದೆ.**

1. ಸಣ್ಣ ಕಾಫಿ ಬೆಳೆಗಾರರಿಗೆ (10 ಹೆಕ್ಟೇರ್ ವರೆಗೆ ಕಾಫಿ ತೋಟ ಹೊಂದಿರುವ ರೈತರಿಗೆ) ಮರುನಾಟಿ ಕಾರ್ಯಕ್ರಮದಡಿ ಅನುತ್ಪಾದಕ / ಹಳೆಯ ಗಿಡಗಳನ್ನು ತೆಗೆದು ಹೆಚ್ಚಿನ ಇಳುವರಿ ನೀಡುವ ಮತ್ತು ರೋಗ ನಿರೋಧಕ ಶಕ್ತಿಯುಳ್ಳ ತಳಿಗಳನ್ನು ಮರು ನಾಟಿ ಮಾಡಲು ಘಟಕ ವೆಚ್ಚದ ಶೇ.40ರಷ್ಟು ಸಹಾಯಧನ.
2. ನೀರಾವರಿ ಸೌಲಭ್ಯ ಕಲ್ಪಿಸುವ (Water Augmentation) ಕಾರ್ಯಕ್ರಮದಡಿ ನೀರು ಸಂಗ್ರಹಣಾ ಘಟಕ ಸ್ಥಾಪನೆ ಮತ್ತು ನೀರಾವರಿ ಉಪಕರಣಗಳ ಖರೀದಿಗಾಗಿ ಘಟಕ ವೆಚ್ಚದ ಶೇ.40ರಷ್ಟು ಸಹಾಯಧನ.
3. ಕಾಫಿ ತೋಟಗಳ ಪರಿಸರ ಪ್ರಮಾಣೀಕರಣ (Eco- Certification) ಕೈಗೊಳ್ಳಲು ಶೇ.50ರಷ್ಟು ಸಹಾಯಧನ.
4. ಸಂಘಟಿತವಾಗಿ ಕಾಫಿ ಮಾರಾಟ ಮಾಡುವುದನ್ನು ಪ್ರೋತ್ಸಾಹಿಸಲು ಸಣ್ಣ ಕಾಫಿ ಬೆಳೆಗಾರರು, ಸ್ವಸಹಾಯ ಸಂಘಗಳು, ಸಹಕಾರ ಸಂಘಗಳಿಗೆ ರೂ.4/- ಪ್ರತಿ ಕೆಜಿಯಂತೆ ಪ್ರೋತ್ಸಾಹಧನ.

5. 2 ಹೆಕ್ಟೇರ್ ವರೆಗೆ ತೋಟ ಹೊಂದಿರುವ ಪರಿಶಿಷ್ಟ ಜಾತಿಯ ಕಾಫಿ ಬೆಳೆಗಾರರಿಗೆ ವಿಶೇಷ ಯೋಜನೆಯಡಿ ಮರುನಾಟಿ, ನೀರಿನ ತೊಟ್ಟಿ ನಿರ್ಮಾಣ, ಕಾಫಿ ಒಣಗಿಸುವ ಘಟಕ, Pulper, ಸಂಗ್ರಹಣಾ ಕೊಠಡಿ ನಿರ್ಮಿಸಲು ಘಟಕ ವೆಚ್ಚದ ಶೇ.90ರಷ್ಟು ಸಹಾಯಧನ.
6. 2 ಹೆಕ್ಟೇರ್ ಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಪರಿಶಿಷ್ಟ ಜಾತಿ ಕಾಫಿ ಬೆಳೆಗಾರರಿಗೆ ಶೇ.75ರಷ್ಟು ಸಹಾಯಧನ.

ಕಾಫಿ ಬೆಳೆಗಾರರು ಎದುರಿಸುತ್ತಿರುವ ಸವಾಲುಗಳನ್ನು ಮನಗಂಡು ಕೇಂದ್ರ ಕಾಫಿ ಮಂಡಳಿಯು ಕಾಫಿ ಬೆಳೆಗಾರರೊಂದಿಗೆ ಸಮಾಲೋಚಿಸಿ ಸಮಗ್ರ ಕಾಫಿ ಅಭಿವೃದ್ಧಿ ಯೋಜನೆ (Integrated Coffee Development Project) 2021-22ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಕೇಂದ್ರ ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗುತ್ತಿದೆ.

**ರಾಜ್ಯ ಸರ್ಕಾರದ ವತಿಯಿಂದ ಕಾಫಿ ಬೆಳೆಗಾರರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.**

- ಕಾಫಿ ಬೆಳೆಗಾರರಿಗೆ ಹೆಚ್ಚುವರಿ ಆದಾಯ ದೊರಕಿಸುವ ಹಿನ್ನೆಲೆಯಲ್ಲಿ ಕಾಫಿ ತೋಟಗಳಲ್ಲಿ ಅಂತರ ಬೆಳೆಯಾಗಿ ಬೆಳೆಯುವ ಕಾಳು ಮೆಣಸು ಮತ್ತು ಕಿತ್ತಳೆ ಬೆಳೆಗಳ ಪುನಃಶ್ಚೇತನಕ್ಕೆ ಪ್ರತಿ ಹೆಕ್ಟೇರ್ ಗೆ ಶೇ.40ರಷ್ಟು ರೂ.20,000ಗಳ ಸಹಾಯಧನವನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ನೀಡಲಾಗುತ್ತಿದೆ.
- ಅಂತರ ಬೆಳೆಗಳಿಗೆ ಕೃಷಿ ಯಾಂತ್ರೀಕರಣ ಕಾರ್ಯಕ್ರಮದಡಿಯಲ್ಲಿ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಣ್ಣ ರೈತರಿಗೆ ಶೇ.50 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ.
- ಕಾಫಿ ಬೆಳೆ ಒಳಗೊಂಡಂತೆ ತೋಟಗಾರಿಕೆ ಬೆಳೆಗಳಲ್ಲಿ ಪರಾಗ ಸ್ಪರ್ಶ ಹೆಚ್ಚಿಸಲು ಹಾಗೂ ರೈತರ ಆದಾಯವನ್ನು ಹೆಚ್ಚಿಸಲು ಜೇನು ಕೃಷಿಗೆ ಪ್ರೋತ್ಸಾಹ ನೀಡುತ್ತಿದ್ದು, ರಾಜ್ಯವಲಯದ ಜೇನು ಸಾಕಾಣಿಕೆ ಕಾರ್ಯಕ್ರಮದಡಿಯಲ್ಲಿ ಪ್ರತಿ ಫಲಾನುಭವಿಗೆ ಗರಿಷ್ಠ 10 ಸಂಖ್ಯೆಯ ಜೇನು ಪೆಟ್ಟಿಗೆಯನ್ನು ಅಳವಡಿಸಿಕೊಳ್ಳಲು ಸಾಮಾನ್ಯ ವರ್ಗದ ರೈತರಿಗೆ ಶೇ.75 ರಷ್ಟು ರೂ.33,750/-ಗಳ ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಷ್ಟು ರೂ.40,050/- ಗಳ ಸಹಾಯಧನ ನೀಡಲಾಗುತ್ತಿದೆ.

ಕಾಫಿ ಬೆಳೆಯ ಬಗೆಗಿನ ಎಲ್ಲಾ ವಿಷಯಗಳನ್ನು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯದ ಅಧೀನ ಬರುವ ಕಾಫಿ ಮಂಡಳಿವತಿಯಿಂದ ನಿರ್ವಹಿಸಲಾಗುತ್ತಿದೆ. 2011-2016ನೇ ಸಾಲಿನವರೆಗೆ ಕಾಫಿ ಮಂಡಳಿವತಿಯಿಂದ ಕಾಫಿ ಬೆಳೆಗಾರರಿಗೆ ಕೃಷಿ ಯಂತ್ರೋಪಕರಣಗಳಾದ ಕಳೆ ಕತ್ತರಿಸುವ ಯಂತ್ರ, ಔಷಧಿ ಸಿಂಪಡಿಸುವ ಯಂತ್ರ, ಟೆಲಿಸ್ಕೋಪಿಕ್ ಪ್ರೂನರ್ಸ್, ಮಿನಿ ಟ್ರಾಕ್ಟರ್ ಇತ್ಯಾದಿ ಉಪಕರಣಗಳ ಖರೀದಿಗಾಗಿ ಆರ್ಥಿಕ ನೆರವು ಒದಗಿಸಲಾಗಿರುತ್ತದೆ. ಪ್ರಸ್ತುತ ಕಾಫಿ ಮಂಡಳಿಯಿಂದ 2021-22ನೇ ಸಾಲಿನಿಂದ 2025-26ನೇ ಸಾಲಿನ ಮುಂದಿನ ಪಂಚ ವಾರ್ಷಿಕ ಯೋಜನೆಯಡಿ ಕೃಷಿ ಯಾಂತ್ರೀಕರಣವನ್ನು ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**HORTI / 543 / HGM / 2021**

(ಮುನಿರತ್ನ)
ಮಾನ್ಯ ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು